ಭಾರೀ ಅಕ್ಕರೆಯಿತ್ತು. ಹಾಗೆಯೇ ಸಲುಗೆ ಕೂಡ. ಹಾಗೊಂದು ದಿನ ಅವನು ಯಾಕೋ ರಾತ್ರಿ ನಿದ್ದೆ ಮಾಡಿದಂತೆ ಕಂಡುಬರಲಿಲ್ಲ. ಒಬ್ಬನೇ ಕುಳಿತವನನ್ನು ಆಸ್ಥೆಯಿಂದ, "ಯಾಕೆ ರಾತ್ರಿ ನಿದ್ದೆ ಮಾಡಲಿಲ್ಲವಾ?'' ಅಂತ ಕೇಳಿದೆ.

ಅವನಿಗೂ ಹೆಂಗಸರಂತೆ ಮಾತಾಡುವ ಅಭ್ಯಾಸವಿದ್ದಿದ್ದನ್ನು ಗಮನಿಸಿದ್ದೆ. ಹಾಗಾಗಿ ನನ್ನ ತರ್ಕದಲ್ಲಿ ಅವನು ಡೇಂಜರ್ ಜೋನ್‌ನ ಮಾಪನದಲ್ಲಿ ಕೆಳಗೆ ಬಂದಿದ್ದ. ನನ್ನ ಭೋಳೆವಾದದ ಪ್ರಕಾರ, 'ಬಹಿರ್ಮುಖಿಗಳು ಅಂತರ್ಮುಖಿಗಳಿಗಿಂತ ಉತ್ತಮರು' ಅಂತಾಗಿತ್ತು.

ಆದರೆ, ನನ್ನ ಭಾರತೀಯ ಮೂಲದ ಕಾರಣವೋ ಮತ್ತೊಂದೋ ಸ್ವಲ್ಪ ದೂರವಿದ್ದವನು ಇವತ್ತು ಮಾತಿಗೆ ತೊಡಗಿದ. ಅದೂ, ಇದೂ ಮಾತಾಡಿ ಎದ್ದು ಹೊರಡುವ ವೇಳೆಗೆ,

"ನಿಂಗೆ ಮದುವೆಯಾಗಿದೆಯಾ?'' ಅಂತ ನನ್ನ ವೈಯಕ್ತಿಕ ಬದುಕಿನ ಬಗ್ಗೆ ಕೇಳಿದ. ಉತ್ತರ ಹೇಳಿ,

"ನಿಂಗೆ?'' ಅಂತ ಕೇಳಿದೆ.

ಮುಖಕ್ಕೆ ಮುಖ ಹತ್ತಿರ ತಂದು ವಿಚಿತ್ರ ಧ್ವನಿಯಲ್ಲಿ "ಐ ಆಮ್ ಗೇ...'' ಅಂದ. ಅವನ ಮಾತಲ್ಲಿ ಏನನ್ನೋ ಆಸ್ಫೋಟಿಸಿದ ಭಾವವಿತ್ತು. ಗೊಳ್ಳಂತ ನಕ್ಕು ಬಿಟ್ಟೆ.

ಹಗೂರವಾಗಿ, "ಸೋ ವಾಟ್? ಡು ಯು ಹ್ಯಾವ್ ಅ ಬಾಯ್‌ಫ್ರೆಂಡ್?" (ಅದಕ್ಕೇನಂತೆ? ನಿನಗೆ ಗೆಳೆಯನಿದ್ದಾನಾ?) ಅಂತ ಕೂಲಾಗಿ ಕೇಳಿದೆ. ಅವನ ವರ್ತನೆ, ಅಲಂಕಾರ, ನಡಿಗೆ ಇವ್ಯಾವುದರಿಂದಲೂ ನನಗೆ ಗೊತ್ತಾಗಿಲ್ಲವೆಂದುಕೊಂಡಿದ್ದನೇನೋ. ಇಂತಹವರನ್ನು, ಲಿಂಗ ಪರಿವರ್ತಿತರನ್ನು ನಾನು ನನ್ನ ವೃತ್ತಿಯಲ್ಲಿ ಅದೆಷ್ಟು ನೋಡಿರಲಿಲ್ಲ.

ಅವನ ಮುಖದಲ್ಲಿದ್ದ ಎಲ್ಲ ಸ್ನಾಯುಗಳು ಇದ್ದಕ್ಕಿದ್ದಂತೆ ಸಡಿಲವಾದವು. ಸಂಕುಚಿತ ಮನೋಭಾವದ ಸಾಂಪ್ರದಾಯಿಕ ಭಾರತೀಯ ಮಹಿಳೆಯಲ್ಲ ಎಂದು ಅವನಿಗೆ ಮನದಟ್ಟಾದಂತಿತ್ತು. ಇಂಡಿಯಾದ ಸಂಪ್ರದಾಯಸ್ಥ ಸಮಾಜ ಕೂಡ ಪೋಲೆಂಡ್‌ನಂತೆಯೇ ಸಲಿಂಗ ಕಾಮವನ್ನು ಒಪ್ಪದ ವಿಚಾರ ಅವನಿಗೆ ಗೊತ್ತಿತ್ತು. ನಾನೂ ಅವರಲ್ಲಿ ಒಬ್ಬಳಿರಬಹುದೆಂಬ ಗುಮಾನಿ ಅವನಿಗಿತ್ತೇನೋ.

ಅವನು ಪ್ರೀತಿಸುತ್ತಿದ್ದ ಗೆಳೆಯ ಹಿಂದಿನ ರಾತ್ರಿ ಇವನಿಗೆ ಕೈ ಕೊಟ್ಟು ಹೋಗಿದ್ದನ್ನು ಹೇಳಿಕೊಂಡ. ಅದೇ ದುಃಖದಲ್ಲಿ ಅವನು ಇಡೀ ರಾತ್ರಿ ನಿದ್ರಿಸಿರಲಿಲ್ಲ.

★★★

ಅವತ್ತಿನಿಂದ ಅವನು ಮತ್ತು ನಾನು ಗೆಳೆತನ ಬೆಳೆಸಿದವು. ವೃತ್ತಿಪರ ಸ್ಪರ್ಧೆಗಳು ಹಿಂದೆ ಸರಿದವು. ಇಬ್ಬರೂ ಬಹಳಷ್ಟು ಹರಟುತ್ತಿದ್ದೆವು. ನಾನೂ ಕೂಡ ನನ್ನ ವೈಯಕ್ತಿಕ ಬದುಕಿನ ಬಗ್ಗೆ ಅಲ್ಪಸ್ವಲ್ಪ ಮಾತಾಡತೊಡಗಿದೆ.

ಸಾಂಪ್ರದಾಯಿಕವಾಗಿ ಕೈ ಹಿಡಿದು ಮದುವೆಯಾಗಿ ವರ್ಷದಿಂದಲೇ ನನ್ನ ಮತ್ತು ನನ್ನ ಗಂಡನ ನಡುವೆ ಆಗಾಗ ಆಗುತ್ತಿದ್ದ ವಾಗ್ಯುದ್ಧಗಳು, ನಮ್ಮ ಸ್ವಭಾವಗಳ ವೈರುದ್ಧ್ಯದ ಕಾರಣ ಉಂಟಾಗುತ್ತಿದ್ದ ಕಿರಿಕಿರಿಗಳ ಬಗ್ಗೆ ಸೂಕ್ಷ್ಮವಾಗಿ ಹೇಳಿಕೊಳ್ಳುತ್ತಿದ್ದೆ. ಮಿ.ಕೆ.ಯ ಅಚ್ಚುಕಟ್ಟುತನ, ಬಿಚ್ಚು ಮಾತು, ಹಾಸ್ಯ ಎಲ್ಲವೂ ನನಗೆ ಇಷ್ಟವಾಗುತ್ತಿದ್ದವು. ಬಲಿಷ್ಠ ಪುರುಷ ದೇಹದ ಈ ಗೆಳತಿಯಲ್ಲಿ ನನಗೇನೋ ಅಪ್ಯಾಯಮಾನವಾದ ವಿಚಾರ ಕಂಡುಬಂದಿತ್ತು. ಅವನ ಬಗ್ಗೆ ತಿಳಿದ ಯಾವ ಸಹೋದ್ಯೋಗಿಗಳೂ ನಮ್ಮ ಬಗ್ಗೆ ಮಾತಾಡುವಂತೆಯೂ ಇರಲಿಲ್ಲ.

ನನ್ನ ಗಂಡ ನನ್ನಲ್ಲಿನ ಹೆಣ್ತನವನ್ನು ಬಹಳ ಬೇಗ ಇಲ್ಲವಾಗಿಸಿದ್ದ. ಮನೆಯ ಹೆಣ್ಣೂ ಗಂಡೂ ಎರಡೂ ನಾನೇ ಆಗಿದ್ದೆ. ಐದು ಪೌಂಡಿನ ನೋಟಿಗೆ ಚಿಲ್ಲರೆ ಬೇಕೆಂದರೂ ನಾನೇ ಹೋಗಬೇಕಿತ್ತು. ಭಾವನಾತ್ಮಕವಾದ ಯಾವ ವಿಚಾರಗಳೂ ನನ್ನ ಗಂಡನನ್ನು ಮುಟ್ಟುತ್ತಿರಲಿಲ್ಲ. ಆತನಿಗೆ ಮಿತ್ರರು, ಸಹೋದ್ಯೋಗಿಗಳು ಅಂತ ಯಾರ ಜೊತೆಯೂ ಉತ್ತಮ ಸಂಪರ್ಕಗಳಿರಲಿಲ್ಲ. ಕೆಲವೊಮ್ಮೆ